**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 2225/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಡಾಃ ಸಿದ್ದೇಗೌಡ | **ಚಾ.ಸಾ.- 17** |
| **ತಂದೆ ಹೆಸರು** | - | ಸಿದ್ದೇಗೌಡ | **ಫ್ರಾ.ಸಾ.- 12** |
| **ವಯಸ್ಸು** | - | 69 ವರ್ಷ | |
| **ಉದ್ಯೋಗ** | - | ವೈದ್ಯಾಧಿಕಾರಿ | |
| **ವಾಸಸ್ಥಳಃ** | - | ಮದ್ದೂರು | |

ದಿನಾಂಕಃ 12-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು 2017 ರಿಂದ ಇಲ್ಲಿಯವರೆಗೆ ಮದ್ದೂರಿನ ಮೆಡಿಕಲ್ ಸೆಂಟರ್ ನಲ್ಲಿ ತಜ್ಞ ವೈದ್ಯರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ

ದಿನಾಂಕಃ 02.05.2018 ರಂದು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ರೂಪಾ ಎಂಬುವವರು ಮನೆಯ ಬಳಿ ದ್ವಿಚಕ್ರ ವಾಹನದಲ್ಲಿ ಅಪಘಾತವಾಗಿದೆಯೆಂದು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಸದರೀ ಗಾಯಾಳುವನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿರುತ್ತೇನೆ. ಸದರೀ ರೂಪಾರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ತಲೆಯ ಮುಂಭಾಗದಲ್ಲಿ 2X2 ಇಂಚು ಅಳತೆಯ ಹರಿದ ಗಾಯ
2. ಬಲಗಿವಿಯಿಂದ ರಕ್ತ ಸ್ರಾವ,
3. ಬಲಗಾಲಿನ ಹಿಂಬದಿಯಲ್ಲಿ 1X1 ಇಂಚು ಅಳತೆಯ ಹರಿದ ಗಾಯವಾಗಿರುತ್ತದೆ.

ನಾನು ಈ ಕುರಿತು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರೀ ಗಾಯಗಳು ನನ್ನ ಅಭಿಪ್ರಾಯದ ಪ್ರಕಾರ 1 ಮತ್ತು 2 ರಲ್ಲಿರುವ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದು, ಗಾಯ ಸಂಖ್ಯೆ 3 ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಸದರೀ ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು,

ಅದನ್ನು ನಿ.ಪಿ. 20 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ. 20(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ರವರಿಂದ**

ಗಾಯ 1 ಮತ್ತು 2 ತೀವ್ರ ಸ್ವರೂಪದ ಗಾಯಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ, ತೀವ್ರ ಸ್ವರೂಪದ ಗಾಯ ಎಂದು ಪರಿಗಣಿಸಬೇಕಾಗಿದರೆ ಶ್ರವಣ ಶಕ್ತಿಯನ್ನು ಕಳೆದುಕೊಂಡಿದ್ದರೆ ಮಾತ್ರ ತೀವ್ರ ಸ್ವರೂಪಾದ ಗಾಯ ಎಂದು ಪರಿಗಣಿಸಲಾಗುತ್ತದೆಯೆಂದರೆ ಸರಿಯಲ್ಲ. ವೈಧ್ಯಕೀಯ ನಿಯಮಂದ ಪ್ರಕಾರ ಗಾಯ 1 ಮತ್ತು 2 ನ್ನು ತೀವ್ರ ಸ್ವರೂಪದ ಗಾಯ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರಾದ ಗಾಯಾಳುವಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ. 20 ರಂತೆ ಸುಳ್ಳು ಗಾಯ ಪ್ರಮಾಣಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.